**ಓ ಎಸ್ ನಂಃ 54/2017**
**ಡಿ ಡಬ್ಲ್ಯೂ ಃ 1**

**ದಿಃ 07.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಕೆ ಆರ್ ವಕೀಲರಿಂದಃ-**

ನಾನು 10 ನೇ ತರಗತಿವರಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಪ್ಲಮಿಂಗ್ ವೃತ್ತಿಯನ್ನು ಮಾಡುತ್ತೇನೆ. 4ನೇ ಪ್ರತಿವಾದಿ ಲೋಕೇಶ್ ರವರು ನನ್ನ ಸ್ನೇಹಿತ. ಲೋಕೇಶ್ ಮತ್ತು ನಾನು ಸುಮಾರು 15 ವರ್ಷಗಳಿಂದ ಸ್ನೇಹಿತರು. ಈ ದಾವೆಯ ವಾದಿ ನನಗೆ ಗೊತ್ತು. ಈ ದಾವೆಯ ವಾದಿಯು ಕಳೆದ 10 ವರ್ಷಗಳಿಂದ ನನಗೆ ಗೊತ್ತು. ವಾದಿ ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತು ಮನೆಯ ಸ್ವತ್ತು ಆಗಿರುತ್ತದೆ. ಈ ದಾವೆಯನ್ನು ಸಲ್ಲಿಸಿದ ನಂತರ ನ್ಯಾಯಾಲಯದಿಂದ ಈ ದಾವೆಯ 4 ನೇ ಪ್ರತಿವಾದಿ ಲೋಕೇಶ್ ಹಾಗೂ ತಮಗೂ ನೋಟಿಸ್ ಬಂದಿದೆ ಎಂದರೆ ಸರಿ. ನಾನು ಮತ್ತು 4 ನೇ ಪ್ರತಿವಾದಿಯು ಜಂಟಿಯಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇವೆ. ಲಿಖಿತ ಹೇಳಿಕೆಯನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರು ನೀಡಿರುತ್ತಾರೆ. ಲಿಖಿತ ಹೇಳಿಕೆಯಲ್ಲಿರುವ ವಿಚಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ನಾನು ಸಾಕ್ಷ್ಯವನ್ನು 4 ನೇ ಪ್ರತಿವಾದಿಯ ವಾರಸುದಾರರಾಗಿ ಸಹ ನುಡಿಯುತ್ತಿದ್ದೇನೆ. 4 ನೇ ಪ್ರತಿವಾದಿಯ ವಾರಸುದಾರರ ಪರವಾಗಿ ಸಾಕ್ಷ್ಯ ನುಡಿಯಲು ನನಗೆ ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. 1ನೇ ಪ್ರತಿವಾದಿಯು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದಿರುವ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 1ನೇ ಪ್ರತಿವಾದಿಯ ಹೆಸರಿನಲ್ಲಿರುವ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 3 ರ ಕ್ರಯದ ಕರಾರು ಪತ್ರವು ನೋಂದಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ 21.08.2013 ರಂದು 1 ರಿಂದ 3 ನೇ ಪ್ರತಿವಾದಿಗಳು ವಾದಿಗಳಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಮುಂಗಡ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 21.08.2013 ರಂದು ವಾದಿಯಿಂದ ಪ್ರತಿವಾದಿ 1 ರಿಂದ 3 ರವರು ಕ್ರಯದ ಕರಾರು ಬಾಬ್ತು ರೂ. 15 ಲಕ್ಷ ಮುಂಗಡ ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ ಹಣವನ್ನು ಪಾವತಿ ಮಾಡಿದ ನಂತರ ಕ್ರಯ ಪತ್ರವನ್ನು ಬರೆದುಕೊಡಬೇಕೆಂದು ಕ್ರಯದ ಕರಾರು ಪತ್ರದಲ್ಲಿ ಒಕ್ಕಣೆ ಇದೆ ಎಂದರೆ

ಸರಿಯಲ್ಲ. ಸದರಿ ವಿಚಾರವು ನಿಪಿ 4 ರ ಋಣಭಾರ ರಾಹಿತ್ಯ ಪತ್ರದಲ್ಲಿ ಸಹ ನಮೂದಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತಮ್ಮ ಮತ್ತು 1 ರಿಂದ 3 ನೇ ಪ್ರತಿವಾದಿ ನಡುವೆ ಯಾವುದಾದರೂ ವ್ಯವಹಾರ ಆಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಿಃ 18.07.2013 ರಂದು ನನ್ನ ಮತ್ತು 1 ರಿಂದ 3 ನೇ ಪ್ರತಿವಾದಿ ನಡುವೆ ಕ್ರಯದ ಕರಾರು ಆಗಿತ್ತು. ವಾದಿಯು ಈ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸುವುದಕ್ಕಿಂತ ಮುಂಚೆ ತಮಗೂ ಹಾಗೂ 4 ನೇ ಪ್ರತಿವಾದಿಗೂ ತಮ್ಮ ವಕೀಲರ ಮುಖಾಂತರ ನೋಟಿಸ್ ನ್ನು ಜಾರಿ ಮಾಡಿದ್ದಾರೆ ಎಂದರೆ ಸರಿ. ಸದರಿ ನೋಟಿಸ್ ನಲ್ಲಿರುವ ಸಂಗತಿಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಾದಿಯು ನನಗೆ ನೀಡಿರುವ ನೋಟಿಸ್ ಗೆ ನಾನು ಜವಾಬನ್ನು ನೀಡಿರುವುದಿಲ್ಲ. ವಾದಿಯ ನೋಟಿಸ್ ಗೆ ಜವಾಬನ್ನು ನೀಡಲು ನನಗೆ ಯಾವುದೆ ತೊಂದರೆ ಇರಲಿಲ್ಲ. ದಿಃ 18.07.2013 ರಲ್ಲಿ ನಾನು 1 ರಿಂದ 3 ನೇ ಪ್ರತಿವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ರೂ. 18 ಲಕ್ಷ ಗಳಿಗೆ ಕ್ರಯದ ಕರಾರು ಒಪ್ಪಂದವನ್ನು ಮಾಡಿಕೊಂಡಿರುತ್ತೇನೆ. ಕ್ರಯದ ಕರಾರಿನ ಮಾತುಕತೆ 1 ನೇ ಪ್ರತಿವಾದಿಯ ಮನೆಯಲ್ಲಿ ಆಯಿತು. ಅದೇ ದಿನ ಕ್ರಯದ ಕರಾರು ಕುರಿತು ಮಾತುಕತೆ ಆಗಿರುತ್ತದೆ. ಮಾತುಕತೆ ಸಮಯದಲ್ಲಿ ಜಗದೀಶ್, ಮಂಜುಳ, ಸಿದ್ದಗಂಗಯ್ಯ ಮತ್ತು ಟಿ ಎನ್ ನರಸಿಂಹಯ್ಯ ರವರು ಹಾಜರಿದ್ದರು. ಸದರಿ ಕ್ರಯದ ಕರಾರು ಪತ್ರಕ್ಕೆ ಸ್ಟಾಂಪ್ ಪೇಪರ್ ನಾನೇ ತಂದಿರುತ್ತೇನೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**